# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 714 |
| ಮಾನ್ಯ ಸದಸ್ಯರ ಹೆಸರು | ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 12.03.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ ವಿವರ | ಉತ್ತರ |
|---|---|---|
| ಅ) | ಸುಮಾರು 70-80 ವರ್ಷಗಳಿಂದ ರಾಜ್ಯದ ಗ್ರಾಮಗಳಲ್ಲಿ ಗ್ರಾಮಠಾಣ ಗಡಿ ವಿಸ್ತರಣೆಯಾಗದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಆ) | ಗ್ರಾಮಠಾಣ ಗಡಿ ವಿಸ್ತರಣೆಯಾಗದೇ ಇರುವುದರಿಂದ ರಾಜ್ಯದ ಬೊಕ್ಕಸಕ್ಕೆ ಆಗುತ್ತಿರುವ ನಷ್ಟದ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಇ) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಂದಾಯ ಇಲಾಖೆ ಜಂಟಿಯಾಗಿ ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಗ್ರಾಅಪ/441/ಗ್ರಾಪಂಅ/2016 (ಭಾಗ-3) ದಿನಾಂಕ:28.10.2016 ಯನ್ನು ಅನುಷ್ಠಾನಗೊಳಿಸಲಾಗಿದೆಯೇ; | ಕರ್ನಾಟಕ ಸರ್ಕಾರದ ಕಂದಾಯ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆ ಗಳು ಜಂಟಿಯಾಗಿ ದಿನಾಂಕ: 28-10-2016 ರಲ್ಲಿ ಗ್ರಾಮಠಾಣಾ ಗಡಿಯನ್ನು ಹೊಸದಾಗಿ ಸರ್ವೆ ಮಾಡಿಸಿ ಗ್ರಾಮಠಾಣಾ ಪುನರ್ ನಿಗಧಿಪಡಿಸುವ ಬಗ್ಗೆ ಮಾರ್ಗ ಸೂಚಿಗಳನ್ನು ನೀಡಲಾಗಿದ್ದು, ಸದರಿ ಗ್ರಾಮಗಳ ಗಡಿ ವಿಸ್ತರಣಾ ಕಾರ್ಯವನ್ನು ಹಂತಹಂತವಾಗಿ ಸರ್ವೆ ನಡೆಸಿ ನಡೆಸಲಾಗುತ್ತಿದೆ.<br><br>ಮುಂದುವರೆದು, ದಿನಾಂಕ:24-04-2020 ರಂದು ಕೇಂದ್ರ ಸರ್ಕಾರದಿಂದ ಗ್ರಾಮೀಣ ಜನವಸತಿ ಪ್ರದೇಶಗಳಿಗೆ ಡ್ರೋಣ್ ಆಧಾರಿತ ಸರ್ವೆ ಮೂಲಕ ಹಕ್ಕುದಾಖಲೆಗಳನ್ನು ಸಿದ್ಧಪಡಿಸಿ ವಿತರಿಸುವ ಸ್ವಮಿತ್ವ ಯೋಜನೆಯನ್ನು ಜಾರಿಗೆ ತರುವ ಮೂಲಕ ರಾಜ್ಯದಲ್ಲಿ ಸದರಿ ಯೋಜನೆಯು ಅನುಷ್ಠಾನದಲ್ಲಿದ್ದು, ಜನವಸತಿ ಪ್ರದೇಶದ ಭೌತಿಕ ಸ್ಥಿತಿಯಂತೆ ಡ್ರೋಣ್ ಸರ್ವೆ ಮೂಲಕ ಎಲ್ಲಾ ಆಸ್ತಿಗಳನ್ನು ಅಳತೆ ಮಾಡಿ ಹಕ್ಕು ದಾಖಲೆಗಳನ್ನು ಸಿದ್ಧಪಡಿಸಿ ವಿತರಿಸಲಾಗುತ್ತಿದೆ.<br><br>ರಾಜ್ಯದಲ್ಲಿ ಸ್ವಮಿತ್ವ ಯೋಜನೆಯಡಿ ಇದುವರೆಗೆ 18139 ಗ್ರಾಮಗಳಲ್ಲಿ Drone Flying ಕೈಗೊಳ್ಳಲಾಗಿದೆ. 3881 ಗ್ರಾಮಗಳಲ್ಲಿ |
| ಈ) | ಅನುಷ್ಠಾನಗೊಳಿಸಿದ್ದಲ್ಲಿ, ಗ್ರಾಮಗಳ ಗಡಿ ವಿಸ್ತರಣೆಯಾಗಿರುವ ಬಗ್ಗೆ; (ಪೂರ್ಣ ಮಾಹಿತಿ ನೀಡುವುದು) | |
| ಉ) | ಇಲ್ಲದಿದ್ದಲ್ಲಿ, ಅನುಷ್ಠಾನ ಮಾಡಲು ಇರುವ ತೊಡಕುಗಳೇನು ಮತ್ತು ಗ್ರಾಮಗಳ ಗ್ರಾಮಠಾಣ ಗಡಿ ವಿಸ್ತರಣೆಯನ್ನು ಯಾವ ಕಾಲಮಿತಿಯೊಳಗೆ ಮಾಡಲಾಗುವುದು? | |

| | | |
|---|---|---|
| | | ಒಟ್ಟು 10.07 ಲಕ್ಷ ಸ್ವಮಿತ್ವ ಪಿ. ಆರ್. ಕಾರ್ಡ್ ವಿತರಿಸಲಾಗಿದ್ದು, ಬಾಕಿ ಇರುವ ಗ್ರಾಮಗಳನ್ನು ಸಹ ಸದರಿ ಯೋಜನೆಯಡಿ ಡ್ರೋಣ್ ಸರ್ವೆ ಮೂಲಕ ಎಲ್ಲಾ ಆಸ್ತಿಗಳನ್ನು ಅಳತೆ ಮಾಡಿ ಹಕ್ಕು ದಾಖಲೆಗಳನ್ನು ವಿತರಿಸಲಾಗುತ್ತದೆ. |

**ಸಂಖ್ಯೆ: ಕಂಇ 37 ಎಸ್‌ಎಸ್‌ಸಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು